ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 14-02-1978.

# *ಸಮೀಪ ಆತ್ಮರ ಲಕ್ಷಣಗಳು.*

(समीप आत्मा की निशानियाँ)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಸ್ವಯಂನ್ನು ಸದಾ ಬಾಪ್‌ದಾದಾರವರ ಜೊತೆ ಅರ್ಥಾತ್ ಸದಾ ಸಮೀಪವಿದ್ದೇವೆಂದು ಅನುಭವ ಮಾಡುತ್ತೀರಾ? ಸಮೀಪ ಆತ್ಮನ ಲಕ್ಷಣವೇನಾಗಿರುತ್ತದೆ? ಯಾರೆಷ್ಟು ಸಮೀಪವಿರುತ್ತಾರೆಯೋ ಸ್ಥಿತಿಯಲ್ಲಿಯೂ, ಕರ್ತವ್ಯದಲ್ಲಿ, ಗುಣಗಳಲ್ಲಿಯೂ ಅಷ್ಟೇ ಬಾಪ್‌ಸಮಾನ್ ಅರ್ಥಾತ್ ಸದಾ ಸಂಪನ್ನ ಅರ್ಥಾತ್ ದಾತಾ, ವಿಶ್ವಕಲ್ಯಾಣಕಾರಿ ಆಗಿರುತ್ತಾರೆ. ವಿಶ್ವಕಲ್ಯಾಣಕಾರಿಯ ಪ್ರತೀ ಸಂಕಲ್ಪವು, ಪ್ರತಿಯೊಂದು ಆತ್ಮನ ಪ್ರತಿ, ಪ್ರಕೃತಿಯ ಪ್ರತಿ ಶುಭಭಾವನೆಯಿರುತ್ತದೆ. ಒಂದು ಸಂಕಲ್ಪವೂ ಸಹ ಭಾವನೆಯಿಲ್ಲದೆ ಆಗುವುದಿಲ್ಲ. ಹೇಗೆ ಬೀಜವು ಫಲದಿಂದ ಸಂಪನ್ನವಾಗಿರುತ್ತದೆ ಅರ್ಥಾತ್ ಬೀಜದಲ್ಲಿ ಇಡೀ ವೃಕ್ಷದ ಸಾರವು ಅಡಗಿರುತ್ತದೆ. ಈ ರೀತಿ ಸಂಕಲ್ಪವೆಂಬ ಬೀಜದಲ್ಲಿ ಶುಭಭಾವನೆ, ಕಲ್ಯಾಣದ ಭಾವನೆ, ದುಃಖಿ-ಅಶಾಂತರಿಗೆ ಪ್ರಾಪ್ತಿಯಾಗಿರುವ ತಮ್ಮ ಶಕ್ತಿಗಳ ಆಧಾರದಿಂದ, ಸದಾ ಸುಖಿ-ಶಾಂತರನ್ನಾಗಿ ಮಾಡುವ ಭಾವನೆ, ಈ ಸರ್ವಪ್ರಾಪ್ತಿ ಅಥವಾ ಸಾರವು ಪ್ರತೀ ಸಂಕಲ್ಪದಲ್ಲಿಯೂ ಅಡಗಿರುತ್ತದೆ. ಯಾವುದೇ ಸಂಕಲ್ಪವೆಂಬ ಬೀಜವು ಈ ಪ್ರಾಪ್ತಿಯಿಂದ ಖಾಲಿ ಅರ್ಥಾತ್ ವ್ಯರ್ಥವಾಗುವುದಿಲ್ಲ. ಕಲ್ಯಾಣದ ಭಾವನೆಯಿಂದ ಸಮರ್ಥವಾಗಿರುತ್ತದೆ.

ಹೇಗೆ ಸ್ಥೂಲವಾದ್ಯವು ಆತ್ಮರಿಗೆ ಅಲ್ಪಕಾಲಕ್ಕಾಗಿ ಉಲ್ಲಾಸದಲ್ಲಿ ತರುತ್ತದೆ. ಬಯಸದಿದ್ದರೂ ಸಹ ಎಲ್ಲರ ಪಾದಗಳು ನರ್ತನ ಮಾಡಲು ತೊಡಗುತ್ತದೆಯಲ್ಲವೆ, ಹೇಗೆ ಮನಸ್ಸು ನರ್ತಿಸುತ್ತದೆಯೋ ಹಾಗೆಯೇ ವಿಶ್ವಕಲ್ಯಾಣಕಾರಿಯ ಪ್ರತೀ ಮಾತು ಆತ್ಮಿಕ ವಾದ್ಯದ ಸಮಾನವಾಗಿ ಉತ್ಸಾಹ ಮತ್ತು ಉಮ್ಮಂಗವನ್ನು ಕೊಡುತ್ತದೆ. ಉದಾಸ ಆತ್ಮವು ತಂದೆಯೊಂದಿಗೆ ಮಿಲನ ಮಾಡುವ ಅನುಭವ ಮಾಡುತ್ತದೆ ಮತ್ತು ಖುಷಿಯಲ್ಲಿ ನರ್ತಿಸತೊಡಗುತ್ತದೆ. ವಿಶ್ವಕಲ್ಯಾಣಕಾರಿಯ ಕರ್ಮ, ಕರ್ಮಯೋಗಿಯಾಗಿರುವ ಕಾರಣದಿಂದ ಪ್ರತೀಕರ್ಮವು ಚರಿತ್ರೆಯಸಮಾನವಾಗಿ, ಗಾಯನ(ಮಹಿಮಾ) ಯೋಗ್ಯವಾಗುತ್ತದೆ. ಪ್ರತೀ ಕರ್ಮ

ಮಹಿಮಾಯೋಗ್ಯವಾಗಿ, ಕೀರ್ತನಾಯೋಗ್ಯವಾಗುತ್ತದೆ. ಹೇಗೆ ಕೀರ್ತನೆಯಲ್ಲಿ ವರ್ಣನೆ ಮಾಡುತ್ತಾರೆ- ನೋಡುವ ಅಲೌಕಿಕತೆ, ನಡೆಯುವ ಅಲೌಕಿಕತೆ, ಪ್ರತೀ ಕಾರ್ಯ, ಇಂದ್ರಿಯಗಳ ಮಹಿಮೆಯು ಅಪರಮಪಾರವೆಂದು ಗಾಯನ ಮಾಡುತ್ತಿರುತ್ತಾರೆಯೋ ಹಾಗೆಯೇ ಪ್ರತೀ ಕರ್ಮ ಮಹಾನ್ ಅರ್ಥಾತ್ ಮಹಿಮಾ ಯೋಗ್ಯವಾಗುತ್ತದೆ. ಇಂತಹ ಆತ್ಮರನ್ನು ಬಾಪ್‌ಸಮಾನ್ ಆತ್ಮರೆಂದು ಹೇಳಲಾಗುತ್ತದೆ. ಈ ರೀತಿ ವಿಶ್ವಕಲ್ಯಾಣಕಾರಿ ಆತ್ಮರ ಪ್ರತೀ ಸೆಕೆಂಡಿನ ಸಂಪರ್ಕವು, ಆತ್ಮರ ಸರ್ವಮನೋಕಾಮನೆಗಳ ಪ್ರಾಪ್ತಿಯ ಅನುಭವ ಮಾಡಿಸುತ್ತದೆ. ಕೆಲವು ಆತ್ಮರಿಗೆ ಶಕ್ತಿಯ, ಕೆಲವು ಆತ್ಮರಿಗೆ ಶಾಂತಿಯ, ಕಷ್ಟವನ್ನು ಸಹಜ ಮಾಡುವ, ಅಧೀನರಿಂದ ಅಧಿಕಾರಿಯಾಗುವ, ಉದಾಸರಿಂದ ಹರ್ಷಿತವಾಗುವ, ಈ ಪ್ರಕಾರವಾಗಿ ವಿಶ್ವಕಲ್ಯಾಣಕಾರಿ ಮಹಾನ್ ಆತ್ಮನ ಸಂಪರ್ಕವು, ಸದಾ ಉಮ್ಮಂಗ ಮತ್ತು ಉತ್ಸಾಹವನ್ನು ತರಿಸುತ್ತದೆ. ಪರಿವರ್ತನೆಯ ಅನುಭವ ಮಾಡಿಸುತ್ತದೆ, ಛತ್ರಛಾಯೆಯ ಅನುಭವ ಮಾಡಿಸುತ್ತದೆ. ಇಂತಹ ವಿಶ್ವಕಲ್ಯಾಣಕಾರಿ ಅರ್ಥಾತ್ ಸಮೀಪ ಆತ್ಮನಾಗುವವರನ್ನೇ ಲಗನ್ನಿನಲ್ಲಿ ಮಗ್ನರಾಗುವಂತಹ ಆತ್ಮನೆಂದು ಹೇಳಲಾಗುತ್ತದೆ. ಈ ರೀತಿ ಆಗುತ್ತಿದ್ದೀರಲ್ಲವೇ?

ತಂದೆಯನ್ನು ನಿಮ್ಮವರನ್ನಾಗಿ ಮಾಡಿಕೊಂಡಿರುವ ಕಾರಣ ಎಲ್ಲರೂ ಅದೃಷ್ಟವಂತರಂತೂ ಆಗಿದ್ದೀರಿ, ಅವರನ್ನೇ ತಂದೆಯು ತನ್ನ ಮಕ್ಕಳನ್ನಾಗಿ ಮಾಡಿಕೊಂಡುಬಿಟ್ಟರು. ತಂದೆಯು ಮಕ್ಕಳನ್ನು ಸ್ವೀಕರಿಸಿದರು ಅರ್ಥಾತ್ ಅಧಿಕಾರಿಯನ್ನಾಗಿ ಮಾಡಿದರು. ಈ ಅಧಿಕಾರವಂತೂ ಎಲ್ಲರಿಗೂ ಸಿಕ್ಕಿಬಿಟ್ಟಿತು ಆದರೆ **ವಿಶ್ವದ ಮಾಲೀಕರಾಗುವ ಅಧಿಕಾರ, ವಿಶ್ವಕಲ್ಯಾಣಕಾರಿಯಾಗುವ ಅಧಿಕಾರದಿಂದ ಆಗುತ್ತದೆ.** ಈಗ ಪ್ರತಿಯೊಬ್ಬರೂ ತಮ್ಮೊಂದಿಗೆ ತಾವು ಕೇಳಿಕೊಳ್ಳಿರಿ- ನಾನು ಅಧಿಕಾರಿಯಾಗಿದ್ದೇನೆಯೇ? ರಾಜ್ಯಭಾಗ್ಯದ ಅಧಿಕಾರಿ ಆಗಿದ್ದೇನೆಯೇ. ಸಿಂಹಾಸನಾಧಿಕಾರಿ ಆಗುವಂತಹ ಅಧಿಕಾರಿಯಾಗಿದ್ದೇನೆಯೇ ಅಥವಾ ರಾಯಲ್ ಫ್ಯಾಮಿಲಿಯಲ್ಲಿ ಬರುವ ಅಧಿಕಾರಿಯಾಗಿದ್ದೇನೆಯೇ? ಅಥವಾ ರಾಯಲ್ ಫ್ಯಾಮಿಲಿಯ ಸಂಪರ್ಕದಲ್ಲಿ ಬರುವ ಅಧಿಕಾರಿಯಾಗಿದ್ದೇನೆಯೇ. ಎಲ್ಲಿಯವರೆಗೆ ತಲುಪಿದ್ದೇನೆ? ರಾಜ್ಯಭಾಗ್ಯದ ಅಧಿಕಾರಿಯಾಗಿದ್ದೇನೆಯೇ?

ವಿದೇಶಿ ಆತ್ಮರೆಲ್ಲರೂ ತಮ್ಮನ್ನು ಏನೆಂದು ತಿಳಿದುಕೊಳ್ಳುತ್ತೀರಿ. ಎಲ್ಲರೂ ರಾಜ್ಯಾಡಳಿತ ಮಾಡುವಿರಾ ಅಥವಾ ರಾಜ್ಯದಲ್ಲಿ ಬರುತ್ತೀರಾ? ಅಥವಾ ಏನು ಸಿಕ್ಕರೂ ಒಪ್ಪಿಗೆಯಿದೆಯೇ? ವಿದೇಶಿ ಆತ್ಮರಿಂದ ಸತ್ಯಯುಗದ ಅಷ್ಟ ಚಕ್ರವರ್ತಿಗಳಲ್ಲಿ ಸಿಂಹಾಸನಾಧಿಕಾರಿಯಾಗುವ ಭರವಸೆಯಿದೆಯೆಂದು ಯಾರು ತಿಳಿಯುತ್ತೀರಿ? ಅಷ್ಟ ಚಕ್ರವರ್ತಿಗಳಲ್ಲಿ ಲಕ್ಷ್ಮೀ-ನಾರಾಯಣ ಫಸ್ಟ್, ಸೆಕೆಂಡ್ ಅದರಲ್ಲಿ ಬರುತ್ತೀರಾ. ಅಷ್ಟ ಚಕ್ರವರ್ತಿಗಳಲ್ಲಿ ಬರಲು ಏನು ಮಾಡಬೇಕಾಗುತ್ತದೆ? ಅಥವಾ ಕೇವಲ 8 ಜನ ಮಾತ್ರ ಆಗುತ್ತಾರೆ ಎಂದು ಯೋಚಿಸಿದ್ದೀರಾ? ಬಹಳ ಸಹಜವಾದ ಮಾತಾಗಿದೆ. ಇದನ್ನು ನೋಡಿ ಪ್ರತೀ ಸಮಯದಲ್ಲಿ, ಪ್ರತೀ ಪರಿಸ್ಥಿತಿಯಲ್ಲಿಯೂ ಅಷ್ಟಶಕ್ತಿಗಳು ಜೊತೆಜೊತೆಯಲ್ಲಿಯೇ ಇಮರ್ಜ್ ರೂಪದಲ್ಲಿರುತ್ತದೆಯೇ? ಒಂದುವೇಳೆ ಎರೆಡು-ನಾಲ್ಕು ಶಕ್ತಿಗಳದ್ದು ಒಂದು ಶಕ್ತಿಯ ಕೊರತೆ ಇದ್ದರೂ ಅಷ್ಟ ಚಕ್ರವರ್ತಿಗಳಲ್ಲಿ ಬರಲು ಸಾಧ್ಯವಿಲ್ಲ. ಅಷ್ಟಶಕ್ತಿಗಳ ಸಮಾನತೆಯಿರಲಿ ಮತ್ತು ಒಂದೇ ಸಮಯದಲ್ಲಿ ಅಷ್ಟಶಕ್ತಿಗಳೂ ಇಮರ್ಜ್ ಆಗಿರಬೇಕು. ಈ ರೀತಿಯೂ ಆಗಬಾರದು- ಸಹನ ಶಕ್ತಿಯು 100% ಇದೆ ಆದರೆ ನಿರ್ಣಯ ಶಕ್ತಿಯು 60% ಅಥವಾ 50% ಇದೆ. ಎರಡರಲ್ಲಿಯೂ ಸಮಾನತೆಯಿರಬೇಕು ಅರ್ಥಾತ್ ಪರ್ಸೆಂಟೇಜ್ ಫುಲ್ ಇರಬೇಕು. ಆಗಲೇ ಸಂಪೂರ್ಣರಾಜ್ಯದ ಸಿಂಹಾಸನಾಧಿಕಾರಿಯಾಗುತ್ತೀರಿ. ಏನಾಗುತ್ತೀರೆಂದು ಹೇಳಿರಿ? ಅಷ್ಟ ಲಕ್ಷ್ಮೀ-ನಾರಾಯಣನ ರಾಜ್ಯವೇ ಅಥವಾ ಸಿಂಹಾಸನಾಧಿಕಾರಿ ಆಗುತ್ತೀರಾ.

ವಿದೇಶಿ ಆತ್ಮರಲ್ಲಿ ಉಮ್ಮಂಗ ಮತ್ತು ಧೈರ್ಯವು ಚೆನ್ನಾಗಿದೆ. ಸಾಹಸ ಮಕ್ಕಳದು ಸಹಯೋಗ ತಂದೆಯದು, ಹೈಜಂಪ್‌ನ ಸ್ಯಾಂಪಲ್ ಆಗಬಹುದು. ಆದರೆ ಇವೆಲ್ಲಾ ಮಾತುಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ವಿಶೇಷ ಆತ್ಮರಾಗಿದ್ದೀರಿ, ಅದಂತೂ ಬಾಪ್ ದಾದಾರವರೂ ತಿಳಿದುಕೊಂಡಿದ್ದಾರೆ. ಸ್ಪರ್ಧೆಯಲ್ಲಿ ನಂಬರ್‌ವನ್ ಓಡುವವರು, ಇಂತಹ ಉಮ್ಮಂಗ-ಉತ್ಸಾಹದವರು, ದೂರವಿದ್ದರೂಸಹ ಸಮೀಪದ ಅನುಭವ ಮಾಡುವವರು, ಇಂತಹ ಆತ್ಮರೂ ಸಹ ಖಂಡಿತವಾಗಿಯೂ

ಇದ್ದಾರೆ. ಈಗ ಸ್ಟೇಜಿನ ಮೇಲೆ ಪ್ರತ್ಯಕ್ಷದಲ್ಲಿ ತಮ್ಮ ಪಾತ್ರವನ್ನಭಿನಯಿಸುತ್ತೀರಿ? ಪುರುಷಾರ್ಥವನ್ನು ಮುಂದುವರೆಸಬೇಕು ಮತ್ತು ಫಸ್ಟ್ ನಂಬರಿನ ವಿಶೇಷತೆಯೇನಾಗಿದೆ, ಅದರನುಸಾರವಾಗಿ ತಮ್ಮ ಪುರುಷಾರ್ಥವನ್ನು ಮಾಡಬೇಕು, ಪ್ರತೀ ಕರ್ಮದಲ್ಲಿ ಏರುವ ಕಲೆಯಿರಲಿ, ಒಳ್ಳೆಯದು-

**ಆಫ್ರಿಕಾದ ಪಾರ್ಟಿಯೊಂದಿಗೆ.**

ಎಲ್ಲರೂ ತೀವ್ರ ಪುರುಷಾರ್ಥಿ ಆಗಿದ್ದೀರಲ್ಲವೆ? ತೀವ್ರ ಪುರುಷಾರ್ಥಿ ಅರ್ಥಾತ್ ಯೋಚಿಸಿದರು ಮತ್ತು ಮಾಡಿದರು. ಯೋಚಿಸುವುದು ಮತ್ತು ಮಾಡುವುದರಲ್ಲಿ ಅಂತರವಿಲ್ಲ. ಹೇಗೆ ಕೆಲವು ಮಾತುಗಳಲ್ಲಿ ಬಹಳ ಯೋಜನೆಯನ್ನು ಮಾಡುತ್ತಾರೆ. ಪ್ರಾಕ್ಟಿಕಲ್‌ನಲ್ಲಿ ಅಂತರವಾಗಿ ಬಿಡುತ್ತದೆಯೆಂದರೆ ತೀವ್ರ ಪುರುಷಾರ್ಥಿಯಾಗಿ ಯಾರಿರುತ್ತಾರೆಯೋ ಅವರು ಯಾವ ಪ್ಲಾನ್ ಮಾಡುತ್ತಾರೆಯೋ, ಪ್ರಾಕ್ಟಿಕಲ್‌ನಲ್ಲಿಯೂ ಅದೇ ಆಗುತ್ತದೆ ಅಂದಮೇಲೆ ಇಂತಹ ತೀವ್ರ ಪುರುಷಾರ್ಥಿಯಲ್ಲವೇ? ಪರರ ರಾಜ್ಯವಾಗಿರುವ ಕಾರಣದಿಂದ ಪರಿಸ್ಥಿತಿಗಳೂ ಸಹ ತಮ್ಮ ಕಡೆ ಬಹಳ ಬರುತ್ತವೆ, ಆದರೆ ಯಾರು ತಂದೆಯ ಜೊತೆ ಸದಾ ಇರುತ್ತಾರೆಯೋ, ಅವರ ಮುಂದೆ ಪರಿಸ್ಥಿತಿಗಳೂ ಸಹ ಸ್ವಸ್ಥಿತಿಯ ಆಧಾರದಿಂದ ಪರಿವರ್ತನೆಯಾಗಿ ಬಿಡುತ್ತದೆ. ಬೆಟ್ಟವೂ ಸಹ ಸಾಸಿವೆಯ ಸಮಾನವಾಗಿ ಬಿಡುತ್ತದೆ. ಇಂತಹ ಅನುಭವ ಮಾಡುತ್ತಾರೆ - ಹೇಗೆಂದರೆ ಇವೆಲ್ಲಾ ಮಾತುಗಳನ್ನು ಬಹಳ ಬಾರಿ ಪಾರು ಮಾಡಿಬಿಟ್ಟಿದ್ದೇವೆ. ನತಿಂಗ್ ನ್ಯೂ. ಹೊಸಮಾತಿನಲ್ಲಿ ಗಾಬರಿಯಾಗುತ್ತದೆ ಆದರೆ ನತಿಂಗ್ ನ್ಯೂ, ಈ ರೀತಿ ಅನುಭವ ಮಾಡುವಂತಹವರು ಸದಾ ಕಮಲಪುಷ್ಪ ಸಮಾನವಿರುತ್ತಾರೆ. ಹೇಗೆ ನೀರು ಕೆಳಗಿರುತ್ತದೆ, ಕಮಲವು ಮೇಲಿರುತ್ತದೆಯೋ ಅದೇ ರೀತಿಯಲ್ಲಿ ಪರಿಸ್ಥಿತಿಗಳು ಕೆಳಗಿರುತ್ತದೆ, ನಾವು ಮೇಲಿರುತ್ತೇವೆ. ಕೆಳಗಿನ ಮಾತುಗಳು ಕೆಳಗೆ ಇರುತ್ತದೆ. ಯಾವಾಗಲಾದರೂ ಯಾವುದೇ ಮಾತುಗಳು ಬರುತ್ತದೆಯೆಂದರೆ ಯೋಚಿಸಿ ಬಾಪ್‌ದಾದಾರವರು ನಮ್ಮ ಜೊತೆಯಿದ್ದಾರೆ. ಸರ್ವಶಕ್ತಿವಂತನು ನಮ್ಮ ಜೊತೆಯಿದ್ದಾರೆ.ಸರ್ವಶಕ್ತಿವಂತನ ಮುಂದೆ ಎಷ್ಟೇ ದೊಡ್ಡ ಪರಿಸ್ಥಿತಿಯೂ ಸಹ, ಇರುವೆಯ ಸಮಾನವಾಗುತ್ತದೆ. ಎಂತಹ ಪರಿಸ್ಥಿತಿಯಿರಲಿ ಆದರೆ ಯಾರು ತಂದೆಯ ಮಕ್ಕಳಾಗುವರು ಅವರ ಜವಾಬ್ದಾರಿಯು ತಂದೆಯದಾಗಿದೆ. ಎಲ್ಲಿರುತ್ತೇವೆ, ಹೇಗಿರುತ್ತೇವೆ. ಏನು ತಿನ್ನುತ್ತೇವೆ ಎಂದು ಯೋಚಿಸಬಾರದು. ಸತ್ಯ ಹೃದಯದವರ ಜೊತೆಗಾರನು ತಂದೆಯಾಗಿದ್ದಾರೆ. ಎಲ್ಲಿಯವರೆಗೆ ತಂದೆಯಿದ್ದಾರೆಯೋ ಅಲ್ಲಿಯವರೆಗೆ ಹಸಿವಿನಿಂದಿರಲು ಸಾಧ್ಯವಿಲ್ಲ. ಯಾವಾಗ ಭಕ್ತರಿಗೆ ಅನೇಕ ಪ್ರಕಾರದ ಅನುಭವವಾಗುತ್ತದೆ ಅವರಂತು ಬಿಕಾರಿಯಾಗಿದ್ದಾರೆ ಅವರು ಹೊಟ್ಟೆಯೇ ತುಂಬಿಬಿಡುತ್ತದೆಯೆಂದರೆ ತಾವಂತು ಅಧಿಕಾರಿಯಾಗಿದ್ದೀರಿ, ತಾವು ಹಸಿವಿನಿಂದಿರಲು ಹೇಗೆ ಸಾಧ್ಯ! ಆದ್ದರಿಂದ ಏನಾಗುತ್ತದೆಯೋ? ಎಂದು ಸ್ವಲ್ಪವೂ ಗಾಬರಿಯಾಗಬಾರದು. ಏನಾಗುತ್ತದೆಯೋ ಅದು ಒಳ್ಳೆಯದಾಗುತ್ತದೆ. ನಿಶ್ಚಯವು ಎಲ್ಲಿಯತನಕ ಇದೆ? ಕೇವಲ ಚಿಕ್ಕದಾದ ಈ ಪರೀಕ್ಷೆಯಾಗುತ್ತದೆ. ಜೀವನವಿಡೀ ಪರೀಕ್ಷೆಯಿರುವುದಿಲ್ಲ. ಒಂದು ಅಥವಾ ಎರಡು ಗಂಟೆಯ ಪರೀಕ್ಷೆ ಆಗುತ್ತದೆ. ಒಂದುವೇಳೆ ಬಾಪ್‌ದಾದಾರವರು ಸದಾ ಜೊತೆಯಿದ್ದಾರೆ, ಪರೀಕ್ಷೆಯನ್ನು ಕೊಡುವ ಸಮಯದಲ್ಲಿ ಒಂದು ಬಲ-ಒಂದು ಭರವಸೆಯಿದೆ ಎಂದರೆ ಈ ರೀತಿ ಪಾರಾಗಿಬಿಡುತ್ತೀರಿ, ಹೇಗೆಂದರೆ ಅಲ್ಲಿ ಏನೂ ಇಲ್ಲವೇ ಇಲ್ಲ. ಹೇಗೆ ಕನಸಿನಲ್ಲಾಗುತ್ತದೆಯಲ್ಲವೆ! ಸ್ವಪ್ನದಲ್ಲಿ ಯಾವ ಮಾತುಗಳಾಗುತ್ತದೆಯೋ, ಅದು ಎದ್ದನಂತರ ಸಮಾಪ್ತಿಯಾಗಿ ಬಿಡುತ್ತದೆ, ಅಂದ ಮೇಲೆ ಇದೂ ಸಹ ದೊಡ್ಡರೂಪದಲ್ಲಿ ಕಂಡು ಬರುತ್ತದೆ ಆದರೆ ಅದೇನೂ ಇಲ್ಲ. ಅಂದ ಮೇಲೆ ಇಂತಹ ನಿಶ್ಚಯ ಬುದ್ಧಿಯವರಾಗಿದ್ದೀರಾ? ಪ್ರತಿಯೊಬ್ಬರ ಮಸ್ತಕದ ಮೇಲೆ ವಿಜಯದ ತಿಲಕವು ಇಡಲ್ಪಟ್ಟಿದೆಯೆಂದರೆ, ಯಾರು ವಿಜಯದ ತಿಲಕವಿರುವ ಆತ್ಮರೇ ಇದ್ದಾರೆಂದರೆ, ಅವರ ಸೋಲಾಗಲು ಸಾಧ್ಯವಿಲ್ಲ. ಪರಿಶ್ರಮಪಟ್ಟು ಬಂದಿದ್ದೀರಿ, ಪರಿಸ್ಥಿತಿಯನ್ನು ಪಾರುಮಾಡಿ ಬಂದಿದ್ದೀರಿ ಆದ್ದರಿಂದ ಬಾಪ್‌ದಾದಾರವರೂ ಸಹ ಶುಭಾಷಯಗಳನ್ನು ಕೊಡುತ್ತಾರೆ. ಇದೂ ಸಹ ಡ್ರಾಮಾದಲ್ಲಿದೆ, ಹೇಗೆ ಸ್ಟೀಮರ್ ಮುರಿದು ಹೋಗುತ್ತದೆಯೆಂದರೆ ಕೆಲವರು ಎಲ್ಲಿಯೋ, ಕೆಲವರು ಎಲ್ಲಿಯೋ ಹೋಗಿಬೀಳುತ್ತಾರೆ. ಇವರೂ ಸಹ ದ್ವಾಪರದಲ್ಲಿ ಅಗಲಿ ಬಿಟ್ಟಿದ್ದಾರೆ, ಕೆಲವರು ವಿದೇಶದಲ್ಲಿ ಮತ್ತು ಆಗುತ್ತದೆಯೆಂದರೆ ಕೆಲವರು ದೇಶದಲ್ಲಿ, ಈಗ ತಂದೆಯು ಚದುರಿರುವ ಮಕ್ಕಳನ್ನು ಒಟ್ಟಿಗೆ ಮೊದಲು ಬಾಬಾರವರ ಮುಂದೆ ಬರುತ್ತಾರೆ. ಮಹಾವೀರನಲ್ಲವೆ.

ಕಥೆಯನ್ನು ಸೇರಿಸುತ್ತಿದ್ದಾರೆ. ಈಗ ನಿಶ್ಚಿಂತವಾಗಿರಿ. ಏನಾದರೂ ಕೇಳಿದ್ದೀರಲ್ಲವೆ- ಭಟ್ಟಿಯ ಮಧ್ಯದಲ್ಲಿಯೂ ಇಲಿಮರಿಗಳು ಪಾರಾಗಿಬಿಟ್ಟಿತು. ಏನಾದರೂ ಆಗಿರಬಹುದು ಆದರೆ ತಾವು ಸುರಕ್ಷಿತವಾಗಿದ್ದೀರಿ, ಕೇವಲ ಮಾಯಾಪ್ರೂಫ್ ಡ್ರೆಸ್ಸನ್ನು ಧರಿಸಿರಬೇಕು. ಮಾಯಾಪ್ರೂಫ್ ಉಡುಪಂತು ಸದಾ ಜೊತೆಯಿರುತ್ತದೆಯಲ್ಲವೆ. ವಿಮಾನದಲ್ಲಿಯೂ ನೋಡಿರಿ, ಆಪತ್ಕಾಲದಲ್ಲಿ ಡ್ರೆಸ್ಸನ್ನು ಕೊಡುತ್ತಾರೆ- ಏನಾದರೂ ಆಗುತ್ತದೆಯೆಂದರೆ, ಇದನ್ನು ಧರಿಸಿರಿ. ಅಂದಮೇಲೆ ತಮಗೆ ಬಹಳ ಸಹಜವಾದ ಸಾಧನವು ಸಿಕ್ಕಿದೆ.

ಒಂದೊಂದು ರತ್ನವೂ ಅಮೂಲ್ಯವಾಗಿದೆ ಏಕೆಂದರೆ ಒಂದುವೇಳೆ ಅಮೂಲ್ಯವಾದ ರತ್ನವಾಗಲಿಲ್ಲವೆಂದರೆ ಕೋಟಿಯಲ್ಲಿ ಕೆಲವರು ತಾವೇ ಹೇಗೆ ಬರುತ್ತೀರಿ! ಪ್ರಪಂಚದವರು ಯಾರನ್ನು ತಮ್ಮವರನ್ನಾಗಿ ಮಾಡಿಕೊಳ್ಳಲು ಚಡಪಡಿಸುತ್ತಿದ್ದಾರೆಯೋ ಅವರು ನಮ್ಮನ್ನು ತನ್ನವರನ್ನಾಗಿ ಮಾಡಿಕೊಂಡರು. ಪ್ರಪಂಚವು ಒಂದು ಸೆಕೆಂಡಿನ ದರ್ಶನಕ್ಕಾಗಿ ಚಡಪಡಿಸುತ್ತಿದೆ, ತಾವಂತು ಮಕ್ಕಳಾಗಿಬಿಟ್ಟಿದ್ದೀರಿ ಅಂದಮೇಲೆ ಎಷ್ಟೊಂದು ನಶೆ, ಎಷ್ಟೊಂದು ಖುಷಿಯಿರಬೇಕು, ಸದಾ ಮನಸ್ಸು ಖುಷಿಯಲ್ಲಿ ನರ್ತಿಸುತ್ತಿರಲಿ. ವರ್ತಮಾನ ಸಮಯದ ಖುಷಿಯ ನರ್ತನವು, ಭವಿಷ್ಯದ ಚಿತ್ರದಲ್ಲಿಯೂ ಸಹ ತೋರಿಸುತ್ತಾರೆ. ಕೃಷ್ಣನನ್ನು ಸದಾ ನೃತ್ಯದ ಭಾವಚಿತ್ರದಲ್ಲಿ ತೋರಿಸುತ್ತಾರಲ್ಲವೆ.

ತಂದೆಯಂತೆ ಮತ್ಯಾರೂ ಇಲ್ಲ. ಅದೇರೀತಿ ತಮ್ಮ ಭಾಗ್ಯದಂತೆ ಮತ್ಯಾರೂ ಭಾಗ್ಯಶಾಲಿಯಿಲ್ಲ. ಒಳ್ಳೆಯದು- ಯಾರು ತಲುಪುವುದಕ್ಕೆ ಸಾಧ್ಯವಾಗಲಿಲ್ಲವೋ ಅವರಿಗೂ ಸಹ ಬಹಳ-ಬಹಳ ನೆನಪುಗಳನ್ನು ಕೊಡಿ. ಖಂಡಿತವಾಗಿಯೂ ಬಾಪ್‌ದಾದಾರವರ ಸ್ನೇಹವು ಸಮೀಪಕ್ಕೆ ತರುತ್ತದೆ. ಅಮೃತವೇಳೆಯಲ್ಲಿ ಎದ್ದು, ತಂದೆಯೊಂದಿಗೆ ಆತ್ಮಿಕ ವಾರ್ತಾಲಾಪ ಮಾಡಿದಾಗ ಎಲ್ಲಾ ಪರಿಸ್ಥಿತಿಗಳ ಸಮಾಧಾನವು ಸ್ಪಷ್ಟವಾಗಿಯೇ ಕಂಡುಬರುತ್ತದೆ. ಯಾವುದೇ ಮಾತಿರಲಿ, ಆತ್ಮಿಕವಾರ್ತಾಲಾಪದಲ್ಲಿ ಅದರ ಪ್ರತ್ಯುತ್ತರವು ಸಿಕ್ಕಿಬಿಡುತ್ತದೆ. ಮಧುಬನ ವರದಾನ ಭೂಮಿಯಿಂದ ವಿಶೇಷವಾಗಿ ಈ ವರದಾನವನ್ನು ತೆಗೆದುಕೊಂಡು ಹೋಗುತ್ತೀರೆಂದರೆ ಇನ್ನೂ ಲಿಫ್ಟ್ ಸಿಕ್ಕಿಬಿಡುತ್ತದೆ. ಯಾವಾಗ ಹೊರೆಯನ್ನು ಇಳಿಸುವುದಕ್ಕಾಗಿ ತಂದೆಯು ಕುಳಿತಿದ್ದಾರೆಂದರೆ ಸ್ವಯಂ ತಾವೇಕೆ ಹೋರುತ್ತೀರಿ! ಎಷ್ಟು ಹಗುರವಾಗಿರುತ್ತೀರಿ ಅಷ್ಟೂ ಮೇಲಕ್ಕೆ ಹಾರುತ್ತೀರಿ. ಹಗುರವಾಗುವುದರಿಂದ ಯಾವ ರೀತಿ ಶ್ರೇಷ್ಠ ಸ್ಥಿತಿಯಾಗಿಬಿಡುತ್ತದೆ ಎಂದು ಅನುಭವ ಮಾಡುತ್ತೀರಿ.

ತಂದೆಯನ್ನು ತಿಳಿದುಕೊಂಡು ಬಿಟ್ಟಿದ್ದೀರಿ, ಪಡೆದುಕೊಂಡಿದ್ದೀರಿ, ಇದಕ್ಕಿಂತ ದೊಡ್ಡಭಾಗ್ಯವಂತು ಮತ್ತಾವುದೂ ಇಲ್ಲ. ಮನೆಯಲ್ಲಿ ಕುಳಿತಿದ್ದಂತೆಯೇ ತಂದೆಯು ಸಿಕ್ಕಿಬಿಟ್ಟರು. ತಂದೆಯೇ ಬಂದು ಜಾಗೃತ ಮಾಡಿದರಲ್ಲವೆ - ಮಕ್ಕಳೇ ಏಳಿರಿ, ದೇಶವು ಯಾವುದಾದರೂ ಆಗಿರಲಿ ಆದರೆ ಸ್ಥಿತಿಯು ಸದಾಕಾಲ ತಂದೆಯ ಜೊತೆ ಇರುವಂತದ್ದಾಗಿರಲಿ, ಭಲೆ ದೇಶದಿಂದ ದೂರವೇ ಇರಬಹುದು ಆದರೆ ತಂದೆಯ ಜೊತೆಯಿರುವುದರಿಂದ ಅತಿಸಮೀಪವಿದ್ದೀರಿ. ಕುಮಾರಿಯರು ನಿರ್ಬಂಧನರಾಗಿದ್ದಾರೆ. ಏತಕ್ಕಾಗಿ? ಸೇವೆಗಾಗಿ, ಡ್ರಾಮಾದಲ್ಲಿ ಇದೂ ಸಹ ಒಂದು ಲಿಫ್ಟ್ ಇದೆ. ಈ ಲಿಫ್ಟ್‌ನ ಲಾಭವನ್ನು ತೆಗೆದುಕೊಳ್ಳಬೇಕು. ಎಷ್ಟೆಷ್ಟು ತಮ್ಮ ಸಮಯವನ್ನು ಈಶ್ವರೀಯ ಸೇವೆಯಲ್ಲಿ ತೊಡಗಿಸುತ್ತೀರೋ ಅಷ್ಟಷ್ಟು ಲೌಕಿಕ ಸೇವೆಯ ಸಹಯೋಗವೂ ಸಿಗುತ್ತದೆ, ಬಂಧನವಿರುವುದಿಲ್ಲ. ತಂದೆಗೆ ಕುಮಾರಿಯರು ಅತಿಪ್ರಿಯವಾಗಿದ್ದಾರೆ ಏಕೆಂದರೆ ಹೇಗೆ ತಂದೆಯು ನಿರ್ಬಂಧನವಾಗಿದ್ದಾರೆಯೋ ಹಾಗೆಯೇ ಕುಮಾರಿಯರೂ ಇದ್ದಾರೆ. ಅಂದಮೇಲೆ ತಂದೆಯ ಸಮಾನ ಆಗಿಬಿಟ್ಟಿರಲ್ಲವೆ. ಒಳ್ಳೆಯದು-

**ಟ್ರಿನಿಡಾಡ್- ಗಯಾನ:-** ವರದಾನ ಭೂಮಿಯಲ್ಲಿ ಬಂದು, ಸ್ವಯಂನ್ನು ಅನೇಕ ವರದಾನಗಳಿಂದ ಸಂಪನ್ನವನ್ನಾಗಿ ಮಾಡಿಕೊಂಡಿದ್ದೀರಿ. ಮಧುಬನವಿರುವುದೇ ಸಂಪಾದನೆಯಿಂದ ಜೋಳಿಗೆಯನ್ನು ತುಂಬಿಸುವ ಸ್ಥಾನ. ಮಧುಬನದಲ್ಲಿ ಬರುವುದು ಅರ್ಥಾತ್ ತಮ್ಮನ್ನು ವರ್ತಮಾನ ಮತ್ತು ಭವಿಷ್ಯದ ಅಧಿಕಾರಿಯಾಗುವ ಸ್ಟಾಂಪ್ ಹಾಕಿಸಿಕೊಳ್ಳುವುದು, ಅಧಿಕಾರಿಯಾಗುವ ಸಾಧನವಾಗಿದೆ- ಮಾಯೆಯ ಅಧೀನತೆಯನ್ನು ಬಿಡುವುದು, ಅಂದಮೇಲೆ ಅಧಿಕಾರಿಯಲ್ಲವೆ. ಒಳ್ಳೆಯದು-

**ಕೆನಡಾ:-** ಕೆನಡಾದ ಎಷ್ಟೊಂದು ರತ್ನಗಳು ಬಂದಿದ್ದಾರೆ. ಕ್ವಾಂಟಿಟಿಯಿಲ್ಲ ಆದರೆ ಕ್ವಾಲಿಟಿಯಂತು ಇದೆ. ಯಾವಾಗ ಒಂದು ದೀಪದಿಂದ ದೀಪಮಾಲೆಯಾಗಿ ಬಿಡುತ್ತದೆಯೋ ಅದೇರೀತಿ ಒಬ್ಬರಿಂದ ಇಷ್ಟಂತು ಆಗಿದ್ದಾರಲ್ಲವೆ. ಆದ್ದರಿಂದ ಒಬ್ಬೊಬ್ಬರೂ ತಿಳಿದುಕೊಳ್ಳಬೇಕು- ನಾನೊಬ್ಬನು ಅನೇಕರಿಗೆ ಸಂದೇಶವನ್ನು ಕೊಟ್ಟು ಮಾಲೆಯನ್ನು ತಯಾರು ಮಾಡಬೇಕಾಗಿದೆ. ಸಂಪರ್ಕದಲ್ಲಿ ಯಾರೆಲ್ಲರೂ ಬರುತ್ತಾರೆಯೋ, ಅವರಿಗೆ ತಂದೆಯ ಪರಿಚಯವನ್ನು ಕೊಡುತ್ತಾ ಸಾಗಿದಾಗ ಯಾರಾದರೊಬ್ಬರು ಬಂದು ಬಿಡುತ್ತಾರೆ. ಯಾರು ಬರುವುದೇ ಇಲ್ಲ ಎಂದು ಸಾಹಸದಿಂದ ಸೋಲಬಾರದು, ಯಾರಾದರೂ ಬರುತ್ತಾರೆ. ಕೆಲಕೆಲವು ಭೂಮಿಯಿಂದ ಫಲವು ನಿಧಾನವಾಗಿ ಕೊಡುತ್ತದೆ, ಕೆಲವು ಬೇಗನೆ ಕೊಡುತ್ತದೆ ಆದ್ದರಿಂದ ಡ್ರಾಮಾನುಸಾರವಾಗಿ ಎಲ್ಲಿಯೇ ಸೇವೆಗಾಗಿ ನಿಮಿತ್ತರಾಗುತ್ತೀರಿ, ಆಗ ಖಂಡಿತವಾಗಿಯೂ ಯಾವುದೋ ರತ್ನವಿದೆ ಆದ್ದರಿಂದಲೇ ನಿಮಿತ್ತರಾಗಿದ್ದೀರಿ. ಲಕ್ಷ್ಯವನ್ನು ಶಕ್ತಿಶಾಲಿಯಾಗಿ ಇಟ್ಟುಕೊಳ್ಳಿರಿ- ಈಗ ನಾವು ಸೇವೆಯಿಂದ ಪ್ರಮಾಣವನ್ನು ಕೊಡಲೇಬೇಕಾಗಿದೆ. ಅಂದ ಮೇಲೆ ಪರಿಶ್ರಮದಿಂದ ಸಫಲರಾಗಿಬಿಡುತ್ತೀರಿ.

**ಲೆಸ್ಟರ್**: ಸದಾ ಅತೀಂದ್ರಿಯ ಸುಖದಲ್ಲಿ ತೂಗುವವರಲ್ಲವೆ. ತಂದೆಯು ಸಿಕ್ಕರು, ಎಲ್ಲವೂ ಸಿಕ್ಕಿತು - ಈ ಸ್ಮೃತಿಯಿಂದ ಅತೀಂದ್ರಿಯ ಸುಖದ ಅನುಭೂತಿಯೂ ಸಹ ಸ್ವತಹವಾಗಿಯೇ ಆಗಿಬಿಡುತ್ತದೆ. ದುಃಖದ ಅವಿದ್ಯಾ, ದುಃಖದ ಹೆಸರು-ಚಿಹ್ನೆಯೂ ಇರಬಾರದು. ಹೇಗೆ ಭವಿಷ್ಯದಲ್ಲಿ ದುಃಖ ಮತ್ತು ಅಶಾಂತಿಯ ಅಜ್ಞಾನವಿರುತ್ತದೆಯೋ, ಅದೇರೀತಿ ಈಗಲೂ ಅನುಭವ ಮಾಡುತ್ತೀರಿ ದುಃಖ-ಅಶಾಂತಿಯ ಪ್ರಪಂಚವೇ - ಬೇರೆಯಾಗಿದೆ. ಅವರು ಕಲಿಯುಗಿಯಾಗಿದ್ದಾರೆ, ನಾವು ಸಂಗಮಯುಗಿಯಾಗಿದ್ದೇವೆ. ಸಂಗಮಯುಗಿಯ ಬಳಿ ದುಃಖ-ಅಶಾಂತಿಯ ಹೆಸರಿರುವುದಿಲ್ಲ, ದುಃಖಿಯನ್ನು ನೋಡಿ ದಯೆಯು ಬರುತ್ತದೆ. ದುಃಖದ ಅನುಭವವಂತು ಬಹಳ ಸಮಯದಲ್ಲಿ ಮಾಡಿದಿರಿ. ಈಗ ಸಂಗಮ ಯುಗವೇ ಅತೀಂದ್ರಿಯ ಸುಖದಲ್ಲಿರುವ ಸಮಯ, ಈ ಅನುಭವವು ಸತ್ಯಯುಗದಲ್ಲಿಯೂ ಆಗುವುದಿಲ್ಲ. ಎಂತಹ ಸಮಯವೋ ಅಂತಹ ಲಾಭವನ್ನು ತೆಗೆದುಕೊಳ್ಳಿರಿ. ಈಗ ಅತೀಂದ್ರಿಯ ಸುಖವನ್ನು ಪಡೆಯುವ ಸೀಜನ್ ಆಗಿದೆ, ಅಂದಮೇಲೆ ಅದರಲ್ಲಿಯೇ ಇರಿ, ಇದರಿಂದ ಕೆಳಗೆ ಬರಬಾರದು. ಲೆಸ್ಟರ್ ಸಹ ಸರ್ವೀಸಿನಲ್ಲಿ ನಂಬರ್ ಮುಂದಿದೆ. ಲಂಡನ್‌ನಲ್ಲಿ ಲೆಸ್ಟರ್‌ನ ಮಹಿಮೆಯೂ ಸಹ ಚೆನ್ನಾಗಿದೆ. ದಯಾಹೃದಯದವರಿದ್ದಾರೆ, ಅವರು ಜೊತೆಯಲ್ಲಿರುವವರನ್ನು ಮುಂದುವರೆಸುತ್ತಾರೆ. ಕುಮಾರ, ಕುಮಾರಿಯರು, ಯುಗಲ್ ಎಲ್ಲರೂ ಪಡೆಯುತ್ತಿದ್ದಾರೆ. ಫಲಿತಾಂಶವು ಚೆನ್ನಾಗಿದೆ ಆದರೆ ಇನ್ನೂ ಮುಂದುವರೆಸಿರಿ. ಈ ರೀತಿ ಸಂಖ್ಯೆಯು ವೃದ್ಧಿಯಾಗಲಿ, ಅದರಿಂದ ಎಲ್ಲಿಯೇ ನೋಡಿದರೂ ಅಲ್ಲಿ ಬ್ರಾಹ್ಮಣರೇ ಕಾಣಿಸಿಕೊಳ್ಳಬೇಕು.

**ಗಯಾನಾ ಪಾರ್ಟಿ**: ಬಾಪ್ ದಾದಾರವರಂತು ಪ್ರತಿಯೊಬ್ಬರನ್ನೂ ಹೃದಯ ಸಿಂಹಾಸನಾಧಿಕಾರಿಯನ್ನಾಗಿ ನೋಡುತ್ತಾರೆ. ಹೇಗೆ ಯಾರಾದರೂ ಬಹಳ ಪ್ರಿಯಮಕ್ಕಳಾಗಿರುತ್ತಾರೆ ಅಥವಾ ಅಗಲಿ ಮರಳಿ ಸಿಕ್ಕಿರುವ ಮುದ್ದಾದ ಮಕ್ಕಳಾಗಿರುತ್ತಾರೆ, ಅವರನ್ನೆಂದೂ ಸಹ ಕೆಳಗಿಸುವುದಿಲ್ಲ ಅಥವಾ ಮಣ್ಣಿನಲ್ಲಿ ಕಾಲಿಡುವುದಕ್ಕೂ ಬಿಡುವುದಿಲ್ಲ. ಅಂದಮೇಲೆ ಬಾಪ್‌ದಾದಾರವರೂ ಸಹ ಮುದ್ದಾದ ಮಕ್ಕಳನ್ನು ಹೃದಯ ಸಿಂಹಾಸನದಿಂದ ಕೆಳಗಿಳಿಯಲು ಬಿಡುವುದಿಲ್ಲ, ಸಿಂಹಾಸನದ ಮೇಲೆಯೇ ವಿರಾಜಮಾನ ಮಾಡಿರುತ್ತಾರೆ. ಇದಕ್ಕಿಂತಲೂ ಶ್ರೇಷ್ಠವಾದ ಸ್ಥಾನವು ಮತ್ತಾವುದಿದೆ? ಅಂದಮೇಲೆಕಾಲು ಮತ್ತೆಲ್ಲಿಡಲು ಸದಾ ಅಲ್ಲಿಯೇ ಇರುತ್ತೀರಲ್ಲವೇ? ಕೆಳಗಿಳಿದು ಬರುವುದಿಲ್ಲವೇ? ಯಾವಾಗ ಮತ್ಯಾವುದೇ ಸ್ಥಾನವೇ ಇಲ್ಲವೆಂದರೆ ಬುದ್ಧಿ ಏನೆನ್ನಲು ಸಾಧ್ಯ? ನೆನಪು ಅರ್ಥಾತ್ ಹೃದಯ ಸಿಂಹಾಸನವಾಗಿದೆ. ಯಾರು ನಿರಂತರಯೋಗಿ ಮಕ್ಕಳಿದ್ದಾರೆಯೋ ಅವರು ಬಾಪ್‌ದಾದಾರವರಿಗೆ ಸದಾ ಜೊತೆಯಿರುವಂತೆ ಕಂಡುಬರುತ್ತಾರೆ. ಸಹಜಯೋಗಿಗಳಲ್ಲವೆ. ಕಷ್ಟವೆನಿಸುವುದಿಲ್ಲವೇ? ಯಾವುದೇ ಪರಿಸ್ಥಿತಿಯಾದರೂ ಸಹ ಪರಿಸ್ಥಿತಿಯು ಭಲೆ ಏರುಪೇರು ಮಾಡುವುದಿರಲಿ ಆದರೆ ಬಾಬಾ ಎಂದು ಹೇಳಿದಿರಿ ಆಗ ಅಚಲ, ಅಂದಮೇಲೆ ಬಾಬಾ ಎಂದು ಹೇಳುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ. ಪರಿಸ್ಥಿತಿಯ ಸಂಕಲ್ಪವು ಹೊರಟುಹೋಗುತ್ತದೆ ಅಂದಮೇಲೆ ಎಷ್ಟು ಸಮಯವು ಪರಿಸ್ಥಿತಿಯ ಸಂಕಲ್ಪವಿರುತ್ತದೆಯೋ, ಅಷ್ಟು ಸಮಯದಲ್ಲಿ ಕಷ್ಟವೆನಿಸುತ್ತದೆ. ಒಂದುವೇಳೆ ಕಾರಣಕ್ಕೆ ಬದಲಾಗಿ ನಿವಾರಣೆಯಲ್ಲಿ ಹೊರಟುಹೋಗುತ್ತೀರೆಂದರೆ ಕಾರಣವೇ ನಿವಾರಣೆಯಾಗಿ ಬಿಡುತ್ತದೆ. ಬ್ರಾಹ್ಮಣರ ಮುಂದೆ ಯಾವುದೇ ಪರಿಸ್ಥಿತಿಯೂ ಇರುವುದಿಲ್ಲ ಏಕೆಂದರೆ ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಿ. ಅವರ ಮುಂದೆ ಈ ಪರಿಸ್ಥಿತಿಯು ಇರುವೆಯ ಸಮಾನವೂ ಆಗಿರುವುದಿಲ್ಲ. ಕೇವಲ

ಏನಾಗುತ್ತದೆ? ಯಾವಾಗ ಯಾವುದೇ ಇಂತಹ ಮಾತುಗಳು ಬರುತ್ತದೆಯೋ ಆ ಸಮಯದಲ್ಲಿ, ಆ ಕಾರಣಕ್ಕಾಗಿ ಸಮಯವನ್ನು ತೊಡಗಿಸಿಬಿಡುತ್ತೀರಿ. ಏನಾಗುತ್ತದೆಯೋ? ಏಕಾಯಿತು? ಎನ್ನುವುದಕ್ಕೆ ಬದಲಾಗಿ ಏನಾಯಿತೋ ಅದರಲ್ಲಿ ಕಲ್ಯಾಣವೇ ಅಡಗಿಸಿ, ಸೇವೆಯು ಸಮಾವೇಶವಾಗಿದೆ ಇದನ್ನು ಯೋಚಿಸಿದಾಗ ಪರಿವರ್ತನೆಯಾಗಿ ಬಿಡುತ್ತದೆ. ಭಲೆ ರೂಪವು ಪರಿಸ್ಥಿತಿಯದಾಗಿದೆ ಆದರೆ ಸೇವೆಯು ಸಮಾವೇಶವಾಗಿದೆ. ಈ ರೀತಿ ಯೋಚಿಸುವುದರಿಂದ ಮತ್ತು ಈ ರೂಪದಿಂದ ನೋಡುವುದರಿಂದ, ಸದಾ ಅಚಲರಾಗಿರುತ್ತೀರಿ ಅಂದಮೇಲೆ ಈಗ ಮಧುಬನದಿಂದ ಏನನ್ನು ಪರಿವರ್ತನೆ ಮಾಡಿ ಹೋಗುವಿರಿ? ಸದಾ ಕಂಪ್ಲಿಟ್, ಕಂಪ್ಲೇಂಟ್ ಇಲ್ಲ. ಈಗಿನವರೆಗೂ ಯಾವ ಫಲಿತಾಂಶವಿದೆಯೋ ಅದರನುಸಾರವಾಗಿ ಚೆನ್ನಾಗಿದೆ. ಈಗ ನಾಲ್ಕೂಕಡೆಯಲ್ಲಿ ಶಬ್ದವನ್ನು ಹರಡುವ ಪ್ರಯತ್ನವನ್ನೂ ಬಹಳಬೇಗ ಮಾಡಿರಿ, ಏಕೆಂದರೆ ಈಗ ಸಮಯವಿದೆ ನಂತರದಲ್ಲಿ ಇಚ್ಛೆಯಿರುತ್ತದೆ ಆದರೆ ಆಗ ಇಂತಹ ಪರಿಸ್ಥಿತಿಗಳಿರುತ್ತವೆ ಆದ್ದರಿಂದ ಮಾಡುವು ದಕ್ಕಾಗುವುದಿಲ್ಲ. ಆದ್ದರಿಂದ ಎಷ್ಟು ಬೇಗನೆ ಮಾಡಲು ಸಾಧ್ಯವಿದೆಯೋ, ಅಷ್ಟು ಚಕ್ರವರ್ತಿಯಾಗಿ ಸಂದೇಶವನ್ನು ಕೊಡುತ್ತಾ ಸಾಗಿರಿ, ಬೀಜವನ್ನು ಬಿತ್ತನೆ ಮಾಡುತ್ತಾ ಸಾಗಿರಿ, ಅದೃಷ್ಟವಂತರಾಗಿದ್ದೀರಿ, ಡ್ರಾಮಾನುಸಾರವಾಗಿ ತಮ್ಮ ಜೀವನದಿಂದ, ವಾಣಿಯಿಂದ, ಕರ್ಮದಿಂದ, ಸರ್ವ ರೀತಿಯಿಂದ ಸೇವೆಯನ್ನು ಮಾಡಲು ನಿಮಿತ್ತರಾಗಿದ್ದೀರಿ ಮತ್ತು ಮುಂದೆಯೂ ಆಗಬಹುದು. ಪ್ರತೀ ಕರ್ಮದಲ್ಲಿ ಎಲ್ಲರಿಗೂ ಜ್ಞಾನಸ್ವರೂಪರಾಗಿ ಕಂಡುಬರಬೇಕು - ಇದೇ ವಿಶೇಷವಾದ ಲಕ್ಷ್ಯವನ್ನಿಡಿ ಏಕೆಂದರೆ ಕರ್ಮವು ಸ್ವತಹವಾಗಿಯೇ ಎಲ್ಲರ ಗಮನ ಸೆಳೆಯುತ್ತದೆ. ಪ್ರತ್ಯಕ್ಷ ಕರ್ಮವು ಬೋರ್ಡ್‌ನ ಕಾರ್ಯವನ್ನು ಮಾಡುತ್ತದೆ. ಕರ್ಮವನ್ನು ನೋಡುತ್ತಾ ಎಲ್ಲರ ಗಮನವು ಹೋಗುತ್ತದೆ- ಇಂತಹ ಕರ್ಮವನ್ನು ಕಲಿಸುವವರು ಯಾರಾಗಿದ್ದಾರೆ! ಅಂದಮೇಲೆ ಈಗ ಯಾವ ನವೀನತೆಯನ್ನು ಮಾಡುವಿರಿ? ಲೈಟ್‌ಹೌಸ್ ಆಗುವಿರಾ? ಒಂದು ಸ್ಥಾನದಲ್ಲಿದ್ದರೂ ಸಹ ನಾಲ್ಕೂಕಡೆಯಲ್ಲಿ ಲೈಟ್‌ನ್ನು ಹರಡಿಸಿರಿ, ಅದರಿಂದ ಯಾರೂ ಸಹ ದೂರನ್ನು ಕೊಡಬಾರದು ಇಷ್ಟು ಸಮೀಪದಲ್ಲಿ ಲೈಟ್‌ಹೌಸ್ ಇತ್ತು, ಆದರೂ ನಮಗೆ ಲೈಟ್ ಸಿಗಲಿಲ್ಲ ಎನ್ನುವಂತಾಗಬಾರದು. ಒಳ್ಳೆಯದು-

**ಜರ್ಮನಿ**:- ಬಾಪ್‌ದಾದಾರವರಿಗೆ ಕ್ವಾಲಿಟಿಯು ಪ್ರಿಯವಾಗುತ್ತದೆ. ಕ್ವಾಲಿಟಿಯು ಚೆನ್ನಾಗಿದೆಯೆಂದರೆ ಕ್ವಾಂಟಿಟಿಯಾಗಿಬಿಡುತ್ತದೆ. ಪರಿಶ್ರಮಪಡುತ್ತಾ ಸಾಗಿರಿ, ಸಫಲತೆಯು ಜನ್ಮಸಿದ್ಧ ಅಧಿಕಾರವಾಗಿದೆ. ಜರ್ಮನಿಯ ಧರಣಿಯ ಮೂಲಕವೂ ಸಹ ಖಂಡಿತವಾಗಿಯೂ ವಿಶೇಷ ಕರ್ಮವಾಗುವುದಿದೆ. ಜರ್ಮನಿಯ ಧರಣಿಯಲ್ಲಿ ಇಂತಹ ವಿಶೇಷ ವ್ಯಕ್ತಿಯಿದ್ದಾರೆ, ಆ ಒಬ್ಬರೂ ಸಹ ಹೆಸರನ್ನು ಬಹಳ ಪ್ರಸಿದ್ಧ ಮಾಡಬಲ್ಲರು, ಜರ್ಮನಿಯಲ್ಲಿ ಗುಪ್ತವಾಗಿರುವ ರತ್ನಗಳಿವೆ. ನಾಲ್ಕೂಕಡೆಯಲ್ಲಿ ಧ್ವನಿಯು ಮೊಳಗಿದಾಗ ಬರುತ್ತಾರೆ. ಈಗಲೂ ಒಳ್ಳೆಯ ಪರಿಶ್ರಮಪಡುತ್ತಿದ್ದೀರಿ, ನಾಲ್ಕೂಕಡೆಯಲ್ಲಿ ಇನ್ನೂ ಹರಡಿಸಿರಿ. ಇದೇ ಲಕ್ಷ್ಯವನ್ನಿಡಬೇಕು- ಮುಂದಿನ ವರ್ಷದಲ್ಲಿ ವಾರೀಸ್ ಕ್ವಾಲಿಟಿ ಗ್ರೂಪ್ ಮಾಡಿ ಕರೆತರಬೇಕು. ಲಕ್ಷ್ಯದಿಂದ ಸಫಲತೆಯಾಗಿಬಿಡುತ್ತದೆ. ಒಳ್ಳೆಯದು- ಮತ್ತೆಲ್ಲಾ ಸಂಕಲ್ಪಗಳನ್ನು ಬಿಟ್ಟು ಒಂದು ಸಂಕಲ್ಪದಲ್ಲಿರಿ - ನಾನು ಕಲ್ಪ-ಕಲ್ಪದ ವಿಜಯಿಯಾಗಿದ್ದೇನೆ, ವಿಜಯವು ನಮ್ಮ ಜನ್ಮ ಸಿದ್ಧ ಅಧಿಕಾರವಾಗಿದೆ. ಅಂದಾಗ ಸಫಲತೆಯೇ ಸಫಲತೆಯಿದೆ. ಸಂಕಲ್ಪ ಮಾಡಿದಿರಿ ಮತ್ತು ಸಫಲತೆಯು ಸಿಕ್ಕಿತು. ಆದ್ದರಿಂದ ಹೆಚ್ಚಾಗಿ ಯೋಚಿಸಬಾರದು. ಪ್ಲಾನ್ ಮಾಡಿರಿ ಆದರೆ ಕಮಲಪುಷ್ಪ ಸಮಾನ ಹಗುರವಾಗಿರಬೇಕು. ಯೋಚಿಸಿದಿರಿ, ಮಾಡಿದಿರಿ ಮತ್ತು ಸಮಾಪ್ತಿ. ಒಂದು ಸಂಕಲ್ಪದಲ್ಲಿ ಎಷ್ಟಿರುತ್ತೀರೋ ಅಷ್ಟೇ ಒಳ್ಳೆಯ ರೀತಿಯಲ್ಲಿ ಟಚಿಂಗ್ ಬರುತ್ತಿರುತ್ತದೆ. ಹೆಚ್ಚಾಗಿ ಸಂಕಲ್ಪ ಮಾಡುವುದರಿಂದ, ಅದರ ತಂದೆಯ ಯಾವ ಸತ್ಯಸಹಯೋಗವಿದೆಯೋ ಅದರಲ್ಲಿ ಸೇರ್ಪಡೆಯಾಗಿ ಬಿಡುತ್ತದೆ. ಆದ್ದರಿಂದ ಒಂದೇ ಸಂಕಲ್ಪವಿರಲಿ- ನಾನು ಬಾಬಾರವನು, ಬಾಬಾ ನನ್ನವರು. ನಾನು ನಿಮಿತ್ತನಾಗಿದ್ದೇನೆ, ಈ ಸಂಕಲ್ಪದಿಂದ ಖಂಡಿತವಾಗಿಯೂ ಸಫಲತೆಯ ಪ್ರಾಪ್ತಿಯಾಗುತ್ತದೆ. ಚಕ್ರವರ್ತಿಯಾಗುತ್ತೀರೆಂದರೆ ಬಹಳ ಒಳ್ಳೆಯ ಹೂಗುಚ್ಛವು ತಯಾರಾಗಿ ಬಿಡುತ್ತದೆ. ಭಲೆ ಕ್ವಾಂಟಿಟಿ ಇರದಿರಬಹುದು ಆದರೆ ಜರ್ಮನಿಯ ಧರಣಿಯಿಂದ ಒಬ್ಬರು ಬಂದರೂ ಸಹ ಹೆಸರು ಪ್ರಸಿದ್ಧವಾಗಿ ಬಿಡುತ್ತದೆ. ಒಳ್ಳೆಯದು.

ರಿವೈಜ್ ಕೋರ್ಸ್/ಅವ್ಯಕ್ತ ಮುರಳಿ 14-02-1978.

***ಸಮೀಪ ಆತ್ಮರ ಲಕ್ಷಣಗಳು.***

ನಾವು ಸ್ಥಿತಿಯಲ್ಲಿ, ಕರ್ತವ್ಯದಲ್ಲಿ, ಗುಣದಲ್ಲಿ, ತಂದೆಯ ಸಮಾನವಾಗಿ ಅರ್ಥಾತ್ ಸದಾ ಸಂಪನ್ನವಾಗಿ, ದಾತನಾಗಿ ಪ್ರತಿಕ್ಷಣ, ಪ್ರತಿ ಸಂಕಲ್ಪದಲ್ಲಿ ಪ್ರತಿಯೊಂದು ಆತ್ಮನ ಪ್ರತಿ, ಪ್ರಕೃತಿಯ ಪ್ರತಿ ಶುಭ ಭಾವನೆ ಇರುವ ವಿಶ್ವಕಲ್ಯಾಣಕಾರಿಯಾಗಿದ್ದು, ಸಂಕಲ್ಪ ಎಂಬ ಬೀಜದಲ್ಲಿ ಶುಭ ಭಾವನೆ, ಕಲ್ಯಾಣ ಭಾವನೆ, ಸರ್ವರನ್ನು ತಂದೆಯ ಸಮಾನ ತಯಾರು ಮಾಡಬೇಕೆಂಬ ಭಾವನೆ, ನಿರ್ಬಲರನ್ನು ಭಾಗ್ಯಶಾಲಿಯಾಗಿ ತಯಾರು ಮಾಡಬೇಕೆಂಬ ಭಾವನೆ ದುಃಖಿ, ಅಶಾಂತ ಆತ್ಮರನ್ನು ಸ್ವಯಂಗೆ ಲಭಿಸಿರುವ ಶಕ್ತಿಗಳ ಆಧಾರದಿಂದ ಸದಾ ಸುಖಿ, ಶಾಂತರನ್ನಾಗಿ ತಯಾರು ಮಾಡಬೇಕೆಂಬ ಭಾವನೆ ಹೀಗೆ ಕಲ್ಯಾಣದ ಭಾವನೆಯಿಂದ ಸಮರ್ಥವಾಗಿರುವ ಆತ್ಮರು "ತಂದೆಗೆ ಸಮೀಪ" ಆತ್ಮರಾಗಿರುತ್ತಾರೆ ಎಂದು ತಿಳಿಸುತ್ತಾ ತಂದೆ ಹೇಳಿರುವ ಮಹಾ ವಾಕ್ಯದಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ಥಿತಿಯಲ್ಲಿ, ಕರ್ತವ್ಯದಲ್ಲಿ, ಗುಣದಲ್ಲಿ ತಂದೆಯ ಸಮಾನವಾಗಿ, ಸದಾ ಸಂಪನ್ನವಾಗಿ, ದಾತನಾಗಿ ಇರುತ್ತಾ ಬಾಪ್‌ದಾದಾರವರಿಗೆ ಸದಾ ಸಮೀಪ ಆತ್ಮನಾಗಿ ಅನುಭವ ಮಾಡಿಕೊಂಡಿದ್ದೇನೆ.

2. ನಾನು ಪ್ರತಿ ಸಂಕಲ್ಪ, ಪ್ರತಿಯೊಂದು ಆತ್ಮನ ಪ್ರತಿ, ಪ್ರಕೃತಿಯ ಪ್ರತಿ ಶುಭ ಭಾವನೆಯನ್ನು ಇಟ್ಟುಕೊಂಡಿರುವ ತಂದೆಯ ಸಮಾನವಾದ ವಿಶ್ವಕಲ್ಯಾಣಕಾರಿ.

3. ನಾನು ಸಂಕಲ್ಪ ಎಂಬ ಬೀಜದಲ್ಲಿ ಶುಭ ಭಾವನೆ, ಕಲ್ಯಾಣ ಭಾವನೆ, ದುಃಖಿ, ಅಶಾಂತಿ ಆತ್ಮರಿಗೆ ಸದಾ ಸುಖಿ, ಶಾಂತರನ್ನಾಗಿ ತಯಾರು ಮಾಡಬೇಕೆಂಬ ಭಾವನೆ ಹೀಗೆ ಸರ್ವರಸಗಳನ್ನು ಪ್ರತಿಯೊಂದು ಸಂಕಲ್ಪದಲ್ಲಿ ಸಮಾವೇಶಗೊಳಿಸಿ ಕಲ್ಯಾಣ ಭಾವನೆಯಿಂದ ಸಮರ್ಥವಾಗಿ ಇದ್ದೇನೆ.

4. ವಿಶ್ವಕಲ್ಯಾಣಕಾರಿಯಾದ ನನ್ನ ಪ್ರತಿಯೊಂದು ಮಾತು ಆತ್ಮಿಕವಾದ್ಯದ ಹಾಗೆ ಉತ್ಸಾಹ-ಉಮ್ಮಂಗಗಳನ್ನು ಕೊಡುತ್ತಿದೆ ಮತ್ತು ಉದಾಸೀನ ಆತ್ಮರಿಗೆ ತಂದೆಯನ್ನು ಮಿಲನ ಮಾಡಿದ ಹಾಗೆ ಅನುಭವ ಮಾಡಿಸಿ, ಸಂತೋಷದಿಂದ ನಾಟ್ಯವನ್ನು ಮಾಡಿಸುತ್ತಿದೆ.

5. ವಿಶ್ವಕಲ್ಯಾಣಕಾರಿಯಾದ ನನ್ನ ಪ್ರತಿ ಕರ್ಮ, ಕರ್ಮಯೋಗಿಯಾಗಿ, ಮಹಿಮಾಯೋಗ್ಯವಾಗಿ, ಕೀರ್ತನಾ ಯೋಗ್ಯವಾಗಿ ಇರುವ ಸಮಾನ ಸಮೀಪ ಆತ್ಮ.

6. ನಾನು ವಿಶ್ವಕಲ್ಯಾಣಕಾರಿಯಾಗಿ ವಿಶ್ವ ರಾಜ್ಯ ಭಾಗ್ಯದ ಅಧಿಕಾರಿಯಾಗಿದ್ದೇನೆ.

7. ನಾನು ಪ್ರತಿ ಸಮಯ, ಪ್ರತಿ ಪರಿಸ್ಥಿತಿಯಲ್ಲಿ ಅಷ್ಟಶಕ್ತಿಗಳನ್ನು ಜೊತೆಯಲ್ಲಿ ಪ್ರತ್ಯಕ್ಷ ಮಾಡುವ ಸಮಾನತೆಯನ್ನು ಪೂರ್ತಿ ಪ್ರತಿಶತ ಇಟ್ಟುಕೊಂಡು ಅಷ್ಟ ಲಕ್ಷ್ಮೀನಾರಾಯಣ ರಾಜ್ಯಕ್ಕೆ ರಾಜ್ಯಕ್ಕೆ ಅಧಿಕಾರಿಯಾಗಿದ್ದೇನೆ.